ಕರ್ನಾಟಕ ಸರ್ಕಾರ

ಸಂ: ಎಎಲ್ಎನ್(ಕೆ.ಆರ್.ಪಿ.ಹೆಚ್)ಎಸ್ಆರ್:63/17-18

ಜಿಲ್ಲಾಧಿಕಾರಿಗಳವರ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು, ದಿನಾಂಕ:07.04.2018

## -: ಅಧಿಕೃತ ಜ್ಞಾಪನ :-

ವಿಷಯ:- ಬೆಂಗಳೂರು ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಹೊರಮಾವು ಅಗರ ಗ್ರಾಮದ ಸ.ನಂ.119/5 ರಲ್ಲಿನ 1-15.08 ಗುಂಟೆ ಪೈಕಿ 0-10 ಗುಂಟೆ ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕೆ. ಭೂ ಪರಿವರ್ತನೆ ಕೋರಿ ಶ್ರೀ ಪಿ.ರಮೇಶ್ ಬಿನ್ ಎಂ.ಪುಟ್ಟಣ್ಣ, ಹೊರಮಾವು ಅಗರ, ಫೀಲ್ಡ್ ರಸ್ತೆ, ಬಾಲಾಜಿ ಡ್ರೈವಿಂಗ್ ಸ್ಕೂಲ್, ಬೆಂಗಳೂರು-560043 ರವರು ಸಲ್ಲಿಸಿರುವ ಅರ್ಜಿ ದಿನಾಂಕ: 05.01.2018

ಉಲ್ಲೇಖ:-
1) ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ/7ಎಲ್‌ಜಿಪಿ95 ದಿ:07-06-1999
2) ಸರ್ಕಾರದ ಸುತ್ತೋಲೆ ಪತ್ರ ಸಂಖ್ಯೆ: ಆರ್.ಡಿ.56 ಎಲ್.ಜಿ.ಪಿ:2008, ದಿ: 10-09-2008 ಮತ್ತು 24-09-2008
3) ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ರವರ ಪತ್ರ ಸಂ: ಎಎಲ್ಎನ್/ಸಿಆರ್: 64/17-18, ದಿನಾಂಕ: 01.02.2018
4) ಸಹಾಯಕ ಕಾರ್ಯಪಾಲಕ ಅಭಿಯಂತರರು(ಉ), ನಗರ ಯೋಜನಾ ವಿಭಾಗ, ಬೆಂಅಪ್ರಾ, ಬೆಂಗಳೂರು ರವರ ಪತ್ರ ಸಂ: ಬೆಂಅಪ್ರಾ/ನಯೋಸ:ಸಿಒಎನ್-1195/1260/17-18, ದಿನಾಂಕ:01.03.2018 & ಉಪ ಆಯುಕ್ತರು (ಭೂಸ್ವಾ) ಬೆಂಅಪ್ರಾ, ಬೆಂಗಳೂರು ರವರ ಪತ್ರದ ಸಂ:ಬೆಂಅಪ್ರಾ/ ಉಪ(ಭೂಸ್ವಾ)921/17-18, ದಿನಾಂಕ:17.02.2018 ವಿಶೇಷ ಭೂಸ್ವಾಧೀನಾಧಿಕಾರಿಗಳು, ಪೋಡಿಯಂ ಬ್ಲಾಕ್, ಬೆಂಗಳೂರು ರವರ ಪತ್ರ ಸಂಖ್ಯೆ:ಎಸ್ಎಲ್ಎಓ/ಎಎಲ್ಎನ್/1820/17-18, ದಿನಾಂಕ:09.02.2018 & ವಿಶೇಷ ಭೂಸ್ವಾಧೀನಾಧಿಕಾರಿಗಳು-2, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ರವರ ಪತ್ರ ಸಂ: ಬೆಂಗಳೂರು /ವಿಭೂಸ್ವಾಅ-2/3956/17-18, ದಿನಾಂಕ: 15.02.2018
5) ಭೂ ಪರಿವರ್ತನಾ ಶುಲ್ಕ ವಾಸದ ಉದ್ದೇಶಕ್ಕೆ ರೂ.13,613/- ಹಾಗೂ ಪೋಡಿ ಶುಲ್ಕ ರೂ.55/- ಒಟ್ಟು ರೂ.13,668/- ಗಳನ್ನು ಚಲನ್ ಸಂ.234 & 223 ದಿ:26.03.2018 ರಂದು ಎಸ್.ಬಿ.ಐ. ಕೆ.ಆರ್.ಪುರಂ ಶಾಖೆ ಇಲ್ಲಿ ಅರ್ಜಿದಾರರು ಜಮಾ ಮಾಡಿರುತ್ತಾರೆ

*-*-*

ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 95(2),95(4) ಮತ್ತು 95(7) ರ ಷರತ್ತುಗಳು ಹಾಗೂ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ನಿಯಮಗಳು 1994ರ ನಿಯಮ 107(1)ರಂತೆ ವಾಸದ ಉದ್ದೇಶಕ್ಕೆ ಎಕರೆ ಒಂದಕ್ಕೆ ರೂ.54,240/-(ಐವತ್ತ್ನಾಲ್ಕು ಸಾವಿರದ ಎರಡು ನೂರಾ ನಲವತ್ತು ರೂ. ಮಾತ್ರ) ರಂತೆ ಅರ್ಜಿದಾರರು ಉಲ್ಲೇಖ (4) ರಲ್ಲಿ ನಮೂದಿಸಿರುವಂತೆ ಹಣವನ್ನು ಜಮಾ ಮಾಡಿದ ಮೇರೆಗೆ ಶ್ರೀ ಪಿ.ರಮೇಶ್ ಬಿನ್ ಎಂ.ಪುಟ್ಟಣ್ಣ, ಹೊರಮಾವು ಅಗರ, ಫೀಲ್ಡ್ ರಸ್ತೆ, ಬಾಲಾಜಿ ಡ್ರೈವಿಂಗ್ ಸ್ಕೂಲ್, ಬೆಂಗಳೂರು-560043 ರವರ ಅರ್ಜಿಯನ್ನು ಪರಿಗಣಿಸಿ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಹೊರಮಾವು ಅಗರ ಗ್ರಾಮದ ಸ.ನಂ.119/5 ರಲ್ಲಿನ 1-15.08 ಗುಂಟೆ ಪೈಕಿ 0-10 ಗುಂಟೆ ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಬಳಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಭೂ ಪರಿವರ್ತನಾ ಆದೇಶವನ್ನು ಹೊರಡಿಸಲಾಗಿದೆ.

1) ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಲು ಸಕ್ಷಮ ಪ್ರಾಧಿಕಾರಿಯಿಂದ ಅಂದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ /ಬಿಎಂ.ಆರ್.ಡಿ.ಎ (ಸ್ಥಳೀಯ ಯೋಜನಾ ಪ್ರಾಧಿಕಾರ)ಬಿ.ಎಂ.ಐ.ಸಿ.ಎ.ಪಿ.ಎ /ಮಾಲಿನ್ಯ ನಿಯಂತ್ರಣ ಮಂಡಳಿ ರವರಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರರಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ.

2) ಈ ಭೂ ಪರಿವರ್ತಿತ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು, ಈ ಜಮೀನನ್ನು ಪೂರ್ವಾನುಮತಿ ಇಲ್ಲದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.

3) ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಗಿ ಇತ್ಯಾದಿಗಳನ್ನು ಸದಸ್ಯ ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಆನೇಕಲ್ ಯೋಜನಾ ಪ್ರಾಧಿಕಾರದಿಂದ ಅನುಮೋದಿಸಿಕೊಂಡು ಆ ನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟುವುದು. ಸದರಿ ಜಮೀನಿನಲ್ಲಿ ಲೇಔಟ್ ಪ್ಲಾನಿಗೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು.

4) ಭೂಪರಿವರ್ತನೆ ಕೋರಿರುವ ಜಮೀನಿನಲ್ಲಿ ಮೂಲಭೂತ ಸೌಕರ್ಯಗಳಿಗೆ ನಿಗಧಿಪಡಿಸಲಾದ ಅಂದರೆ ರಸ್ತೆ ಜಾಗ, ರಸ್ತೆ ಮಾರ್ಜಿನ್, ಉದ್ಯಾನವನ, ಸಿ.ಎ ನಿವೇಶನ, ಖಾಲಿ ಜಾಗ ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ /ಬಿ.ಎಂ.ಆರ್.ಡಿ.ಎ (ಸ್ಥಳೀಯ ಯೋಜನಾ ಪ್ರಾಧಿಕಾರ)/ ಬಿ.ಎಂ.ಐ.ಸಿ.ಎ.ಪಿ.ಎ. ಪ್ರಾಧಿಕಾರದಿಂದ ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟ ಪಡಿಸಿದ ನಿಯಮಗಳ ರೀತ್ಯಾ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸಿ ಸಕ್ಷಮ ಪ್ರಾಧಿಕಾರಗಳಿಗೆ ಪರಿತ್ಯಾಗ ಪತ್ರ (Relinquish Deed) ಮಾಡಿಕೊಡತಕ್ಕದ್ದು ಹಾಗೂ ಸ್ಥಳೀಯ ಯೋಜನಾ ಪ್ರಾಧಿಕಾರ ವಿಧಿಸಿರುವ ಷರತ್ತುಗಳಿಗೊಳಪಟ್ಟಿರುತ್ತದೆ.

5) ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮೋದಿತ ನಕ್ಷೆ ಪಡೆಯದೆ ನಿವೇಶನಗಳನ್ನು/ ಕಟ್ಟಡಗಳನ್ನು ಸಂಬಂಧಪಟ್ಟ ನೋಂದಾವಣಾಧಿಕಾರಿಗಳಿಂದ/ ಉಪನೋಂದಣಾಧಿಕಾರಿಗಳಿಂದ ನೋಂದಾವಣೆ ಮಾಡತಕ್ಕದ್ದಲ್ಲ, ಖಾತೆದಾರರು ಒಂದು ವೇಳೆ ಭೂ ಪರಿವರ್ತನೆ ಮಂಜೂರು ಮಾಡಿರುವ ಜಮೀನಿಗೆ ಪೂರಾ ವಿಸ್ತೀರ್ಣವನ್ನು ಮಾರಾಟ ಮಾಡಲು ಉದ್ದೇಶಿಸಿದ್ದಲ್ಲಿ ಈ ಆದೇಶ ಅನ್ವಯ ಬರುವುದಿಲ್ಲ.

6) ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತ್ಯಾ ಒದಗಿಸಿಕೊಡುವುದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.

7) ಈ ಜಮೀನಿಗೆ ಹಾಕು ಪೋಟ್ ಖರಾಬು ಜಮೀನು ಇದ್ದಲ್ಲಿ ಕರ್ನಾಟಕ ಭೂ ಕಂದಾಯ ಕಾಯಿದೆ 1964 ರ ಕಲಂ 67 ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು, ತಹಶೀಲ್ದಾರ್‌ರವರು ಈ ಬಾಬ್ತು ಆರ್.ಟಿ.ಸಿ.ಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

8) ಸರ್ಕಾರದ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ:7556-665 ಆರ್ ಮತ್ತು ಬಿ-6-54-5 ಮತ್ತು ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರದ ನಂ.ಪಿ 1/7(11) 67, ದಿನಾಂಕ: 1.1.1966 ರಂತೆ ಸರ್ಕಾರವು ಕಾಲಕಾಲಕ್ಕೆ ನೀಡುವ ಆದೇಶದಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 40 ಮೀಟರ್‌ಗಳ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 25 ಮೀಟರ್‌ಗಳ ಅಂತರವನ್ನು ಕಾದಿರಿಸಬೇಕು ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

9) ಈ ಭೂ ಪರಿವರ್ತನಾ ಜಮೀನಿನಲ್ಲಿ ಸ್ಥಾಪಿಸಲಾಗುವ ಕೈಗಾರಿಕಾ ಘಟಕಗಳು ಹೊರದೂಡುವ ಹೊಗೆ, ಅನಿಲ ಇತರೆ ಕಲ್ಮಶಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು. ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತಿತ ಜಮೀನಿನಲ್ಲಿ ಸ್ಥಾಪಿಸುವ ಕೈಗಾರಿಕಾ ಘಟಕಗಳು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಪರಿಸರ ಇಲಾಖೆಗೆ ಅನುಮತಿ ಹೊಂದಿರತಕ್ಕದ್ದು.

10) ಈ ಆದೇಶವು ಸದರಿ ಜಮೀನಿಗೆ ಸಂಬಂಧಪಟ್ಟಂತೆ ಯಾವುದೇ ನ್ಯಾಯಾಲಯದಲ್ಲಿನ ದಾವೆ/ ರಿಟ್ ಅರ್ಜಿ ಮೇಲ್ಮನವಿಯ ತೀರ್ಪಿಗೆ ಒಳಪಟ್ಟಿರುತ್ತದೆ.

11) ಪ್ರಸ್ತಾವಿತ ಜಮೀನಿನ ಬಗ್ಗೆ ಯಾವುದೇ ಭೂ ಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಿದ್ದಲ್ಲಿ ಈ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ.

12) ಪರಿಷ್ಕೃತ ಮಾಸ್ಟರ್ ಪ್ಲಾನ್ -2015 ರಲ್ಲಿ ಸೂಕ್ಷ್ಮ ವಲಯ (Sensitive Zone) ನಲ್ಲಿ ಬರುವ ಪ್ರದೇಶಗಳಿಗೆ ಸಂಬಂಧಪಟ್ಟ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ಉದ್ದೇಶಿತ ಜಾಗದಲ್ಲಿ ಯಾವುದೇ ರೀತಿಯ ಅಭಿವೃದ್ಧಿಯನ್ನು ಕೈಗೊಳ್ಳಬಾರದು

13) ಉದ್ದೇಶಿತ ಜಾಗದಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಬೇಕಾದಲ್ಲಿ ಪ್ರಾಧಿಕಾರದಿಂದ ರಚಿತವಾದ ಉಪ ಸಮಿತಿಯ ನಿರ್ಣಯದಂತೆ ನಕ್ಷೆಗಳನ್ನು ಅನುಮೋದಿಸಿಕೊಳ್ಳತಕ್ಕದ್ದು.

14) ಅರ್ಜಿದಾರರು ಯಾವುದೇ ಸತ್ಯಾಂಶಗಳನ್ನು ಮರೆ ಮಾಚಿ, ಅನಧಿಕೃತ ದಾಖಲೆಗಳ ಮೇಲೆ ಈ ಅಧಿಕೃತಜ್ಞಾಪನ ಪಡೆದಿರುವುದು ಸ್ಪಷ್ಟಪಟ್ಟಲ್ಲಿ ತತ್‌ಕ್ಷಣ ರದ್ದುಗೊಳ್ಳುತ್ತದೆ. ಹಾಗೂ ಇದರಿಂದ ಅರ್ಜಿದಾರರಿಗಾಗಲೀ ಅಥವಾ ಅವರ ಉತ್ತರಾಧಿಕಾರಿಗಳಿಗಾಗಲೀ ಆಗುವ ಯಾವುದೇ ಲುಕ್ಸಾನಿಗೆ

ಸರ್ಕಾರವಾಗಲೀ ಅಥವಾ ಈ ಪ್ರಾಧಿಕಾರವಾಗಲೀ ಯಾವುದೇ ರೀತಿಯ ಜವಾಬ್ದಾರರಾಗಿರುವುದಿಲ್ಲ. ಇದರ ಪೂರ್ಣ ಹೊಣೆಗಾರಿಕೆ ಅರ್ಜಿದಾರರದ್ದೇ ಆಗಿರುತ್ತದೆ.

15) ಪ್ರಶ್ನಿತ ಜಮೀನು ಸರ್ಕಾರದಿಂದ ಮಂಜೂರಾದ ಯಾವುದೇ ಸರ್ಕಾರಿ ಜಮೀನಾಗಿದ್ದಲ್ಲಿ ಪಕ್ಕಾ ಪೋಡಿಯಾಗದ ಮತ್ತು ಪಕ್ಕಾ ಪೋಡಿ ಮಾಡಿಸಿಕೊಳ್ಳದೇ ತಪ್ಪು ಮಾಹಿತಿ ನೀಡಿ ಭೂ ಪರಿವರ್ತನೆ ಆದೇಶ ಪಡೆದಿದ್ದು ಕಂಡು ಬಂದಲ್ಲಿ ಸದರಿ ಆದೇಶವನ್ನು ರದ್ದುಗೊಳಿಸಲಾಗುವುದು.

16) ಪ್ರಶ್ನಿತ ಜಮೀನು ಮಂಜೂರಾದ ಸರ್ಕಾರಿ ಜಮೀನಾಗಿದ್ದಲ್ಲಿ, ತಕ್ಷಣವೇ ಪಕ್ಕಾ ಪೋಡಿ ಮಾಡಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

17) ಸಹಾಯಕ ಕಾರ್ಯಪಾಲಕ ಅಭಿಯಂತರರು(ಉ), ನಗರ ಯೋಜನಾ ವಿಭಾಗ, ಬೆಂಅಪ್ರಾ, ಬೆಂಗಳೂರು ರವರ ಪತ್ರದ ದಿನಾಂಕ: 01.03.2018 ರ ಪತ್ರದಲ್ಲಿ ನಮೂದಿಸಿರುವ ಷರತ್ತಿಗೊಳಪಟ್ಟಿರುತ್ತದೆ.

18) ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶ ಯಾವುದೇ ಸೂಚನೆ ನೀಡದೆ ರದ್ದುಗೊಳಿಸಲಾಗುವುದು ಮತ್ತು ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 96 ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮತೆಗೆದುಕೊಳ್ಳಲಾಗುವುದು. ಅಲ್ಲದೆ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೆ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಖಾತೆದಾರರಿಂದ ವಸೂಲಿ ಮಾಡಲಾಗುವುದು.

19) ಈ ಆದೇಶವು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ ಮೂಲ ಅರ್ಜಿ ಸಂ.222/2014 ದಿನಾಂಕ: 5-5-2016 ರಂತೆ ಕೆರೆ, ಪ್ರೈಮರಿ, ಸೆಕೆಂಡರಿ, ಟರ್ಷರಿ, ಡ್ರೈನ್‌ಗಳಿದ್ದಲ್ಲಿ ನಿಗಧಿತ ಬಫರ್ ಬಿಡುವ ಷರತ್ತಿಗೆ ಹಾಗೂ ಸದರಿ ಪ್ರದೇಶದಲ್ಲಿ ಅಭಿವೃದ್ಧಿ ಚಟುವಟಿಕೆಗಳು ಬರಬಾರದೆಂಬ ಷರತ್ತಿಗೆ ಒಳಪಟ್ಟಿರುತ್ತದೆ.

: : **ಷೆಡ್ಯೂಲ್ ವಿವರ** : :

ಬೆಂಗಳೂರು ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಹೊರಮಾವು ಅಗರ ಗ್ರಾಮದ ಸ.ನಂ.119/5 ರಲ್ಲಿ 1-15.08 ಎ.ಗುಂ. ಪೈಕಿ 0-10 ಗುಂಟೆ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕೆ ಭೂ ಪರಿವರ್ತಿತ ಜಮೀನಿಗೆ

ಚಕ್ಕುಬಂದಿ

| ಸ.ನಂ. | ಪೂರ್ವಕ್ಕೆ | ಪಶ್ಚಿಮಕ್ಕೆ | ಉತ್ತರಕ್ಕೆ | ದಕ್ಷಿಣಕ್ಕೆ |
|---|---|---|---|---|
| 119/5 | ಸ.ನಂ.119/5 ರ ಉಳಿಕೆ ಜಾಗ | ಸ.ನಂ.119/5 ರ ಉಳಿಕೆ ಜಾಗ | ಸ.ನಂ.119/2 ರ ಜಾಗ | ಸಂಪರ್ಕ ರಸ್ತೆ |

(ಕೆ.ಎ.ದಯಾನಂದ)
ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು.

<u>ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಿದೆ:-</u>

1) ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ರವರಿಗೆ ಮೇಲ್ಕಂಡ ಅಧಿಕೃತ ಜ್ಞಾಪನ ಮತ್ತು ಚಲನ್ ಹಾಗೂ ಕರಾರು ಪತ್ರದೊಂದಿಗೆ ಕಳುಹಿಸುತ್ತಾ, ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ ನಂಬರ್ ಭೂ ಪರಿವರ್ತನೆಯಾಗಿದೆ ಎಂದು ಗಣಕೀಕೃತ ಆರ್.ಟಿ.ಸಿ.ಯಲ್ಲಿ ಕೂಡಲೇ ನಮೂದಿಸತಕ್ಕದ್ದು ಮತ್ತು ಈ ಜಮೀನಿನ ಖಾತೆದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿತಗೊಳಿಸತಕ್ಕದ್ದು
2) ಸಹಾಯಕ ಕಾರ್ಯಪಾಲಕ ಅಭಿಯಂತರರು(ಉ), ನಗರ ಯೋಜನಾ ವಿಭಾಗ, ಬೆಂಅಪ್ರಾ, ಬೆಂಗಳೂರು ರವರಿಗೆ
3) ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪ ವಿಭಾಗ, ಕಂದಾಯ ಭವನ, ಬೆಂಗಳೂರು ರವರಿಗೆ
4) ಉಪ ನಿರ್ದೇಶಕರು, ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು ಉಪ ವಿಭಾಗ, ಬೆಂಗಳೂರು ಇವರಿಗೆ ಆರ್.ಟಿ.ಸಿ. ಹಾಗೂ ನಕ್ಷೆಯ ಪ್ರತಿಯೊಂದಿಗೆ ಕಳುಹಿಸುತ್ತಾ, ಭೂ ಪರಿವರ್ತನಾ ಪೋಡಿ ಕಾರ್ಯವನ್ನು ಜರೂರಾಗಿ ಪೂರೈಸಲು ಸೂಚಿಸಿದೆ
5) ಉಪ ನೋಂದಣಾಧಿಕಾರಿಗಳು, ಕೆ.ಆರ್.ಪುರ ಹೋಬಳಿ, ಬೆಂಗಳೂರ ಪೂರ್ವ ತಾಲ್ಲೂಕು ರವರಿಗೆ
6) ಅರ್ಜಿದಾರರಾದ ಶ್ರೀ ಪಿ.ರಮೇಶ್ ಬಿನ್ ಎಂ.ಪುಟ್ಟಣ್ಣ, ಹೊರಮಾವು ಅಗರ, ಫೀಲ್ಡ್ ರಸ್ತೆ, ಬಾಲಾಜಿ ಡ್ರೈವಿಂಗ್ ಸ್ಕೂಲ್, ಬೆಂಗಳೂರು-560043 ರವರಿಗೆ ಮಾಹಿತಿಗಾಗಿ
7) ಹೆಚ್ಚಿನ ಪ್ರತಿ

ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು

ನಕಲು

ಜಿಲ್ಲಾಧಿಕಾರಿಗಳ ಪರವಾಗಿ
ಬೆಂಗಳೂರು ಜಿಲ್ಲೆ.
11.7.19

**ಕರ್ನಾಟಕ ಸರ್ಕಾರ**

ನಂ:ಎಎಲ್‌ಎನ್(ಕೆಆರ್‌ಪಿಹೆಚ್)ಎಸ್‌ಆರ್/ 63 /17-18

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು ದಿನಾಂಕ: 23-03-2018.

**:: ತಿಳುವಳಿಕೆ ಪತ್ರ ::**

ವಿಷಯ:- ಬೆಂಗಳೂರು ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಹೊರಮಾವು ಅಗರ ಗ್ರಾಮದ ಸರ್ವೆ ನಂ.119/5 ರಲ್ಲಿನ 1-15.08 ಎಕರೆ/ ಗುಂಟೆ ಪೈಕಿ 0-10 ಗುಂಟೆ ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ರವರ ಪತ್ರ ಸಂಖ್ಯೆ: ಎಎಲ್‌ಎನ್ ಸಿಆರ್ 64 /17-18 ದಿನಾಂಕ 1-2-2018.

ನೀವು ಭೂ ಪರಿವರ್ತನೆ ಕೋರಿ ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಹೊರಮಾವು ಅಗರ ಗ್ರಾಮದ ಸರ್ವೆ ನಂ.119/5 ರಲ್ಲಿನ 1-15.08 ಎಕರೆ/ ಗುಂಟೆ ಪೈಕಿ 0-10 ಗುಂಟೆ ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಸಲ್ಲಿಸಿರುವ ಅರ್ಜಿಯನ್ನು ಪರಿಶೀಲಿಸಲಾಗಿದೆ ಹಾಗೂ ಈ ಬಾಬ್ತು ಈ ಕೆಳಗೆ ನಮೂದಿಸಿರುವ ಭೂ ಪರಿವರ್ತನಾ ಶುಲ್ಕವನ್ನು ಮತ್ತು ಪೋಡಿ ಶುಲ್ಕವನ್ನು ಸರ್ಕಾರಕ್ಕೆ ಜಮಾ ಮಾಡಿ ಈ ತಿಳುವಳಿಕೆ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ರೂ.100-00 (ರೂಪಾಯಿ ಒಂದು ನೂರು ಮಾತ್ರ)ಛಾಪಾ ಕಾಗದದಲ್ಲಿ ಕರಾರು ಪತ್ರದಲ್ಲಿ ನೋಟರಿಯವರಿಂದ ಪ್ರಮಾಣೀಕರಿಸಿ ಚಲನ್/ಡಿಡಿ ಅನ್ನು 15 ದಿವಸದೊಳಗಾಗಿ ಹಾಜರುಪಡಿಸುವುದು. ಇಲ್ಲವಾದಲ್ಲಿ ನಿಮ್ಮ ಅರ್ಜಿಯನ್ನು ತಿರಸ್ಕರಿಸಲಾಗುವುದು ಹಾಗೂ ಈ ಕೆಳಕಂಡ ಷೆಡ್ಯೂಲ್ ಭೂಪರಿವರ್ತನಾ ಆದೇಶಕ್ಕೆ ಅನುಗುಣವಾಗಿರುತ್ತದೆ.

2)ಅಂತಿಮವಾಗಿ ಅಧಿಕೃತ ಜ್ಞಾಪನ ನೀಡುವವರೆಗೆ ಭೂ. ಪರಿವರ್ತನೆ ಬಗ್ಗೆ ಈ ನೋಟೀಸು ಯಾವುದೇ ಹಕ್ಕನ್ನು ನೀಡುವುದೆಂದು ಭಾವಿಸತಕ್ಕದ್ದಲ್ಲ.

3)ಅರ್ಜಿದಾರರು ಯಾವುದೇ ಸತ್ಯಾಂಶಗಳನ್ನು ಮರೆ ಮಾಚಿ, ಅನಧಿಕೃತ ದಾಖಲೆಗಳ ಮೇಲೆ ಈ ನೋಟೀಸು ಪಡೆದಿರುವುದು ಸ್ಪಷ್ಟಪಟ್ಟಲ್ಲಿ ಇನ್ನಾವುದೇ ತಿಳುವಳಿಕೆ ಇಲ್ಲದೆ ಈ ನೋಟೀಸು ತನ್ನಿಂತಾನೇ ರದ್ದುಗೊಳ್ಳುತ್ತದೆ ಹಾಗೂ ಇದರಿಂದ ಅರ್ಜಿದಾರರಿಗಾಗಲೀ ಅಥವಾ ಅವರ ಉತ್ತರಾಧಿಕಾರಿಗಳಿಗಾಗಲೀ ಆಗುವ ಯಾವುದೇ ಲುಕ್ಸಾನಿಗೆ ಸರ್ಕಾರವಾಗಲೀ ಅಥವಾ ಈ ಪ್ರಾಧಿಕಾರವಾಗಲೀ ಯಾವುದೇ ರೀತಿಯ ಜವಾಬ್ದಾರರಾಗಿರುವುದಿಲ್ಲ. ಇದರ ಪೂರ್ಣ ಹೊಣೆಗಾರಿಕೆ ಅರ್ಜಿದಾರರದ್ದೇ ಆಗಿರುತ್ತದೆ.

ಚಕ್ಕುಬಂದಿ

| ಸ.ನಂ. | ಪೂರ್ವಕ್ಕೆ | ಪಶ್ಚಿಮಕ್ಕೆ | ಉತ್ತರಕ್ಕೆ | ದಕ್ಷಿಣಕ್ಕೆ |
|---|---|---|---|---|
| 119/5 | ಸ.ನಂ.119/5 ರ ಉಳಿಕೆ ಜಾಗ | ಸ.ನಂ.119/5 ರ ಉಳಿಕೆ ಜಾಗ | ಸ.ನಂ.119/2 ರ ಜಾಗ | ಸಂಪರ್ಕ ರಸ್ತೆ |

| ಸರ್ವೆ ನಂಬರ್ | ವಿಸ್ತೀರ್ಣ ಎಕರೆ/ಗುಂಟೆ | ಹಣ ಪಾವತಿ ವಿವರ | ಮೊಬಲಗು ರೂ. ಪೈಸೆ |
|---|---|---|---|
| 119/5 | 0-10 | 1) ಭೂ ಪರಿವರ್ತನಾ ಶುಲ್ಕ ಎಕರೆ ಒಂದಕ್ಕೆ ವಾಸದ ಉದ್ದೇಶಕ್ಕೆ ರೂ.54,450-00 ರಂತೆ<br>2) ಪೋಡಿ ಶುಲ್ಕ ರೂ. 55-00 ರಂತೆ. | 13,613-00<br>55-00 |
| ಒಟ್ಟು | 0-10 | | 13,668-00 |

(ಹದಿಮೂರು ಸಾವಿರದ ಆರುನೂರಾ ಅರವತ್ತೆಂಟು ರೂಪಾಯಿಗಳು ಮಾತ್ರ)

ಜಿಲ್ಲಾಧಿಕಾರಿಗಳ ಪರವಾಗಿ
ಬೆಂಗಳೂರು ಜಿಲ್ಲೆ, ಬೆಂಗಳೂರು.

ಶ್ರೀ ಪಿ. ರಮೇಶ್ ಬಿನ್ ಎಂ.ಮುಟ್ಟಣ್ಣ
ಹೊರಮಾವು ಅಗರ, ಫೀಲ್ಡ್ ರಸ್ತೆ,
ಬಾಲಾಜಿ ಡ್ರೈವಿಂಗ್ ಸ್ಕೂಲ್,
ಬೆಂಗಳೂರು-43.

ಕೆ.ಆ.ಸಂ.2

ಕರ್ನಾಟಕ ಸರ್ಕಾರ

ಕೆ.ಆರ್.ಪುರ ಖಾತೆ ಹಳೇ ಮದ್ರಾಸ್ ರಸ್ತೆ ಯಲ್ಲಿರುವ ಎಸ್.ಬಿ.ಐ.

ಮೂಲಪ್ರತಿ ಪಾವತಿಸಿದ

| ಖಜಾನೆ ಕೋಡು | | | | ಡ್ರಾ.ಅ.ಕೋಡು | | | | | ದಿನಾಂಕ | | | ಚಲನ್/ಟೋಕನ್ ನಂಬರ್ |
|---|---|---|---|---|---|---|---|---|---|---|---|---|
| 0 | 1 | 0 | 3 | R D | 0 | 0 | 0 | 8 | 24 | 03 | 2018 | |

| | |
|---|---|
| ಪಾವತಿದಾರನ ಹೆಸರು: | ಶ್ರೀ.[illegible] |
| ವಿಳಾಸ: | ಹೊರಮಾವು ಅಗರ, ಫೀಲ್ಡ್ ರಸ್ತೆ, ಬಾಲಾಜಿ ಡ್ರೈವಿಂಗ್ ಸ್ಕೂಲ್, ಬೆಂಗಳೂರು-43. |

ಪಾವತಿಯ ಉದ್ದೇಶ:
ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಹೊರಮಾವು ಅಗರ ಗ್ರಾಮದ ಸ.ನಂ.119/5 ರಲ್ಲಿ 1-15.08 ಎ/ಗುಂಟೆ ಪೈಕಿ 0-10 ಗುಂಟೆ ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಂಜೂರು ಮಾಡುವ ಬಗ್ಗೆ

ಲೆಕ್ಕದ ಬಾಬಿನ ವಿವರ:
ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ಬೆಂಗಳೂರು ರವರ ತಿಳುವಳಿಕೆ ಪತ್ರ ಸಂಖ್ಯೆಎಎಲ್ಎನ್(ಕೆ.ಆರ್.ಪಿ.ಪೂರ್ವ)ಎಸ್ಆರ್.63/17-18, ದಿನಾಂಕ: 23.03.2018.

ಸರಿಯಾಗಿದೆ ಹಣ ಸ್ವೀಕರಿಸಿ

ತಹಶೀಲ್ದಾರ್ ಬೆಂಗಳೂರು ಪೂರ್ವ ತಾಲ್ಲೂಕು

ಅಧಿಕಾರಿಯ ಸಹಿ ಮತ್ತು ಪದನಾಮ

| ಪಾವತಿಯ ವಿವರ | ಲೆಕ್ಕ ಶೀರ್ಷಿಕೆ ಕೋಡ್ | | | | | | | | | | | ಮೊಬಲಗು ರೂ. |
|---|---|---|---|---|---|---|---|---|---|---|---|---|
| ಪೋಡಿ ಶುಲ್ಕ | 0 | 0 | 2 | 9 | 0 | 0 | 1 | 0 | 6 | 0 | 0 1 | 55-00 |
| | | | | | | | | | | | | |
| ಒಟ್ಟು ಮೊತ್ತ | | | | | | | | | | | | 55-00 |

ಐವತ್ತೈದು ರೂಪಾಯಿಗಳು ಮಾತ್ರ

ತಾರೀಖು: 24.03.2018

ಸ್ಥಳ:ಕೆ.ಆರ್.ಪುರ

ಪಾವತಿದಾರನ ಸಹಿ

ರೂ. ... ರೂಪಾಯಿಗಳು ಮಾತ್ರ ಸ್ವೀಕರಿಸಿದೆ

ಖಜಾಂಚಿ ಲೆಕ್ಕಿಗರು ಖಜಾನೆ/ಬ್ಯಾಂಕ್ ಅಧಿಕಾರಿ

25 MAR 2018

Challan

J-00 0234

ಕೆ.ಆ.ಸಂ.2

ಕರ್ನಾಟಕ ಸರ್ಕಾರ

ಕೆ.ಆರ್.ಪುರ ಖಾತೆ ಹಳೇ ಮದ್ರಾಸ್ ರಸ್ತೆ ಯಲ್ಲಿರುವ ಎಸ್.ಬಿ.ಐ. ಬ್ಯಾಂಕ್/ಖಜಾನೆಯಲ್ಲಿ

ಮೂಲಪ್ರತಿ ಪಾವತಿಸಿದ

| ಖಜಾನೆ ಕೋಡು | | | | ಡ್ರಾ.ಅ.ಕೋಡು | | | | | ದಿನಾಂಕ | | | ಚಲನ್/ಟೋಕನ್ ನಂಬರ್ |
|---|---|---|---|---|---|---|---|---|---|---|---|---|
| 0 | 1 | 0 | 3 | R D | 0 | 0 | 0 | 8 | 24 | 03 | 2018 | |

| | |
|---|---|
| ಪಾವತಿದಾರನ ಹೆಸರು: | ಶ್ರೀ.[illegible] |
| ವಿಳಾಸ: | ಹೊರಮಾವು ಅಗರ, ಫೀಲ್ಡ್ ರಸ್ತೆ, ಬಾಲಾಜಿ ಡ್ರೈವಿಂಗ್ ಸ್ಕೂಲ್, ಬೆಂಗಳೂರು-43. |

ಪಾವತಿಯ ಉದ್ದೇಶ:
ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಹೊರಮಾವು ಅಗರ ಗ್ರಾಮದ ಸ.ನಂ.119/5 ರಲ್ಲಿ 1-15.08 ಎ/ಗುಂಟೆ ಪೈಕಿ 0-10 ಗುಂಟೆ ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಂಜೂರು ಮಾಡುವ ಬಗ್ಗೆ

ಲೆಕ್ಕದ ಬಾಬಿನ ವಿವರ:
ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ಬೆಂಗಳೂರು ರವರ ತಿಳುವಳಿಕೆ ಪತ್ರ ಸಂಖ್ಯೆಎಎಲ್ಎನ್(ಕೆ.ಆರ್.ಪಿ.ಪೂರ್ವ)ಎಸ್ಆರ್.63/17-18, ದಿನಾಂಕ: 23.03.2018.

ಸರಿಯಾಗಿದೆ ಹಣ ಸ್ವೀಕರಿಸಿ

ತಹಶೀಲ್ದಾರ್ ಬೆಂಗಳೂರು ಪೂರ್ವ ತಾಲ್ಲೂಕು

ಅಧಿಕಾರಿಯ ಸಹಿ ಮತ್ತು ಪದನಾಮ

| ಪಾವತಿಯ ವಿವರ | ಲೆಕ್ಕ ಶೀರ್ಷಿಕೆ ಕೋಡ್ | | | | | | | | | | | | ಮೊಬಲಗು ರೂ. |
|---|---|---|---|---|---|---|---|---|---|---|---|---|---|
| ಭೂಪರಿವರ್ತನೆ (ದಂಡ) ಶುಲ್ಕ | 0 | 0 | 2 | 9 | 0 | 0 | 1 | 0 | 6 | 0 | 0 | 6 | 13,613-00 |
| | | | | | | | | | | | | | |
| ಒಟ್ಟು ಮೊತ್ತ | | | | | | | | | | | | | 13,613-00 |

ಹದಿಮೂರು ಸಾವಿರದ ಆರು ನೂರ ಹದಿಮೂರು ರೂಪಾಯಿಗಳು ಮಾತ್ರ

ತಾರೀಖು: 24.03.2018

ಸ್ಥಳ:ಕೆ.ಆರ್.ಪುರ

ಪಾವತಿದಾರನ ಸಹಿ

ರೂಪಾಯಿಗಳು ಮಾತ್ರ ಸ್ವೀಕರಿಸಿದೆ


ಖಜಾಂಚಿ ಲೆಕ್ಕಿಗರು ಖಜಾನೆ/ಬ್ಯಾಂಕ್ ಅಧಿಕಾರಿ

26 MAR 2018

Challan

ಗ್ರಾಮ : ಹೊರಮಾವು ಅಗರ ಹೋಬಳಿ : ಕೆ ಆರ್ ಪುರ ತಾಲ್ಲೂಕು : ಬೆಂ.ಪೂರ್ವ ಜಿಲ್ಲೆ : ಬೆಂ. ನಗರ

## ಸ.ನಂ 119/5 ರ ಪೈಕಿ ಭೂಪರಿವರ್ತನೆ ಕೋರಿರುವ ಬಾಬ್ತು ನಕ್ಷೆ




| ಕ್ರಮ ಸಂಖ್ಯೆ | ಸ ನಂ | ಒಟ್ಟು ವಿಸ್ತೀರ್ಣ ಎ-ಗು | ಆಕಾರಬಂದಿನಂತೆ ಖರಾಬು (ಎ—ಗುಂ) | | | ಅರ್ಜಿದಾರರಿಗೆ ಹಕ್ಕು ಇರುವ ವಿಸ್ತೀರ್ಣ | ಭೂಪರಿವರ್ತನ ಕೋರಿರುವ ವಿಸ್ತೀರ್ಣ | ಭೂಪರಿವರ್ತನ ಕೋರಿರುವ ಪ್ರದೇಶದಲ್ಲಿನ ಖರಾಬು | | | ಷರಾ: |
|---|---|---|---|---|---|---|---|---|---|---|---|
| | | | 5 A | 5 B | 5 C | | | 5 A | 5 B | 5 C | |
| 1 | 119/5 | 2-09 | 0-00 | 0-06 | 0-06 | 1-15 1/2 | 0-10 | 0-00 | 0-00 | 0-00 | |

☐ ಈ ಬಣ್ಣದಿಂದ ಗುರ್ತಿಸಿರುವ ಪ್ರದೇಶವು 0-10 ಗುಂ ಇದ್ದು ಪಿ. ರಮೇಶ್ ಬಿನ್ ಮುಟ್ಟಣ್ಣ ರವರು ವಾಸದ ಉದ್ದೇಶಕ್ಕಾಗಿ ಭೂಪರಿವರ್ತನೆ ಕೋರಿರುವ ಪ್ರದೇಶವಾಗಿರುತ್ತೆ,
ಈ ನಂಬರಿನಲ್ಲಿ ಹಳ್ಳ ಕಾಲುದಾರಿ ಬಗ್ಗೆ 0—06 ಗುಂ ಖರಾಬಿದ್ದು ಭೂಪರಿವರ್ತನೆ ಕೋರಿರುವ ಪ್ರದೇಶ ಖರಾಬಿರುವುದಿಲ್ಲ.

▒ ಈ ಬಣ್ಣದಿಂದ ಗುರುತಿಸಿರುವುದು ಸಂಪರ್ಕ ರಸ್ತೆಯಾಗಿರುತ್ತದೆ
ಈ ನಕ್ಷೆಯನ್ನು ಎ ಎಲ್ ಎನ್ ಎಸ್ ಆರ್ / ರ ಮೇರೆಗೆ ತಯಾರಿಸಿದೆ

ಚಕ್ಕುಬಂದಿ :

ಪೂರ್ವಕ್ಕೆ : ಸ ನಂ 119/5 ರ ಉಳಿಕೆ ಜಾಗ
ಪಶ್ಚಿಮಕ್ಕೆ : ಸ ನಂ 119/5 ರ ಉಳಿಕೆ ಜಾಗ
ಉತ್ತರಕ್ಕೆ : ಸ ನಂ 119/2 ರ ಜಾಗ
ದಕ್ಷಿಣಕ್ಕೆ : ಸಂಪರ್ಕ ರಸ್ತೆ

ತಯಾರಿಸಿದವರು

ಭೂಮಾಪಕರು
ಬೆಂ.ಪೂ.ತಾಲ್ಲೂಕು

ಜಿಲ್ಲಾಧಿಕಾರಿಗಳ ಪರವಾಗಿ
ಬೆಂಗಳೂರು ಜಿಲ್ಲೆ

ತಹಶೀಲ್ದಾರ್
ಬೆಂಗಳೂರು ಪೂರ್ವ ತಾಲ್ಲೂಕು,
ಕೃಷ್ಣರಾಜಪುರ